◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

NEED24 NEWS
हर ख़बर, हर शहर

ನೀಡ್ 24 ನ್ಯೂಸ್

ಪ್ರತಿ ಸುದ್ದಿ, ಪ್ರತಿ ನಗರ

◆ ADVT ◆
ಇಲ್ಲಿ ಜಾಹೀರಾತು
98700 06472 · need24.digital

DIGITAL E-PAPER

PRGI APPLICATION UNDER PROCESS
Application No. T/GJ/2026/0619/2304/1577

GST
GSTIN 24CINPG0564Q1ZT

UDYAM REGISTERED
UDYAM-GJ-14-0003714

◆ DIGITAL NEWS NETWORK ◆
ಭಾರತದ ವಿಶ್ವಾಸಾರ್ಹ ಬಹುಭಾಷಾ ಡಿಜಿಟಲ್ ನ್ಯೂಸ್ ನೆಟ್‌ವರ್ಕ್
11+ Languages | 24×7 Live | e-Paper Daily

ನಮ್ಮ App ಡೌನ್‌ಲೋಡ್ ಮಾಡಿ
Download on the App Store
GET IT ON Google Play

www.need24.digital
info@need24.in
+91 98700 06472
FOLLOW US:

तेज़ | सटीक | निष्पक्ष | जनहित में | सच की आवाज़ | जन-जन की आवाज़ | निडर पत्रकारिता

LOCAL

ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರ-ದೋಣಿ ಮೊಡಗು ರಸ್ತೆ ಮುಚ್ಚಲ್ಪಟ್ಟಿದೆ, ಜನರ ಆಕ್ರೋಶ ಹೆಚ್ಚಿದೆ



ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರದಿಂದ ದೋಣಿ ಮೊಡಗುಗೆ ಹೋಗುವ ರಸ್ತೆ ಸುಮಾರು ಕೆಲವು ತಿಂಗಳುಗಳಿಂದ ಮುಚ್ಚಲ್ಪಟ್ಟಿದೆ. ಈ ರಸ್ತೆ ಸ್ಥಳೀಯ ಜನರಿಗೆ ಮುಖ್ಯ ಸಂಚಾರ ಮಾರ್ಗವಾಗಿದ್ದು, ಅದರ ನಿರಂತರ ಅಡಚಣೆಯಿಂದ ಪ್ರಯಾಣಕ್ಕೆ ಗಂಭೀರ ತೊಂದರೆ ಉಂಟಾಗಿದೆ.

ರಸ್ತೆಯ ಮುಚ್ಚುವಿಕೆಯ ಪರಿಣಾಮವಾಗಿ ಜನರು ಪರ್ಯಾಯ ಮಾರ್ಗಗಳನ್ನು ಹುಡುಕಬೇಕಾಯಿತು, ಇದರಿಂದ ಪ್ರಯಾಣ ಸಮಯ ಹೆಚ್ಚಿದ್ದು, ದೈನಂದಿನ ಕೆಲಸಗಳಲ್ಲಿ ವಿಳಂಬ ಉಂಟಾಯಿತು. ವಿಶೇಷವಾಗಿ ವಿದ್ಯಾರ್ಥಿಗಳು, ಕಾರ್ಮಿಕರು ಮತ್ತು ವ್ಯವಹಾರಿಕ ಪ್ರಯಾಣಿಕರು ಈ ಅಸೌಕರ್ಯದಿಂದ ಪ್ರಭಾವಿತರಾಗಿದ್ದಾರೆ.

ಸ್ಥಳೀಯ ಜನರ ನಡುವೆ ಆಕ್ರೋಶ ಹೆಚ್ಚಿದ್ದು, ಅವರು ಸಂಬಂಧಿತ ಅಧಿಕಾರಿಗಳಿಂದ ತಕ್ಷಣದ ಪರಿಹಾರ ಮತ್ತು ರಸ್ತೆ ಮರು ತೆರೆಯುವ ಕ್ರಮಗಳನ್ನು ಬೇಡುತ್ತಿದ್ದಾರೆ. ಪ್ರಸ್ತುತ ಪರಿಸ್ಥಿತಿಯನ್ನು ಸುಧಾರಿಸಲು ಯಾವ ಕ್ರಮಗಳು ತೆಗೆದುಕೊಳ್ಳಲಾಗುತ್ತಿದೆ ಎಂಬುದು ಸ್ಪಷ್ಟವಾಗಿಲ್ಲ.

— Shivappa

ಸೋಮನಮರಡಿ ಗ್ರಾಪಂ ವ್ಯಾಪ್ತಿಯ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಲು ಒಮ್ಮತದ ಒತ್ತಾಯಅರಕೇರಾ ತಾಲೂಕು ಕೇಂದ್ರದ ದೂರದ ಪ್ರಯಾಣಕ್ಕೆ ಮುಕ್ತಿ ನೀಡಿ; ಜನಾಭಿಪ್ರಾಯ ಸಂಗ್ರಹ ಸಭೆಯಲ್ಲಿ ಕೈ ಎತ್ತಿ ಬೆಂಬಲಿಸಿದ ಗ್ರಾಮಸ್ಥರು



ದೇವದುರ್ಗ–ಅರಕೇರಾ | ಬ್ರೇಕಿಂಗ್ ನ್ಯೂಸ್

ಸೋಮನಮರಡಿ ಗ್ರಾಪಂ ವ್ಯಾಪ್ತಿಯ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಲು ಒಮ್ಮತದ ಒತ್ತಾಯ

ಅರಕೇರಾ, ನ. 3: ಅರಕೇರಾ ತಾಲೂಕಿಗೆ ಸೇರ್ಪಡೆಗೊಂಡಿರುವ ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮನಮರಡಿ, ಬಿ.ಆರ್. ಗುಂಡ, ಮ್ಯಾಕಲದೊಡ್ಡಿ, ನಾಗಲಾಪುರ ಹಾಗೂ ಸಂಪತ್‌ರಾಯನದೊಡ್ಡಿ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಬೇಕು ಎಂದು ಐದು ಗ್ರಾಮಗಳ 920ಕ್ಕೂ ಅಧಿಕ ಗ್ರಾಮಸ್ಥರು ಒಮ್ಮತದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಂಗಳವಾರ ಬೆಳಗ್ಗೆ 11 ಗಂಟೆಗೆ ಸೋಮನಮರಡಿ ಗ್ರಾಮದಲ್ಲಿ ಅರಕೇರಾ ತಹಶೀಲ್ದಾರ್ ಹಾಗೂ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಜನಾಭಿಪ್ರಾಯ ಸಂಗ್ರಹ ಸಭೆಯಲ್ಲಿ ಐದು ಗ್ರಾಮಗಳ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಈ ವೇಳೆ ಕೈ ಎತ್ತುವ ಮೂಲಕ ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸುವ ಬೇಡಿಕೆಗೆ ಬೆಂಬಲ ಸೂಚಿಸಿದರು.

ಅರಕೇರಾಕ್ಕೆ ತೆರಳಲು ದೂರದ ಸಮಸ್ಯೆ:

ಸೋಮನಮರಡಿ ಗ್ರಾಮವು ಅರಕೇರಾ ತಾಲೂಕು ಕೇಂದ್ರದಿಂದ ಸುಮಾರು 46 ಕಿ.ಮೀ., ಸಂಪತ್‌ರಾಯನದೊಡ್ಡಿ 51 ಕಿ.ಮೀ., ಬಿ.ಆರ್. ಗುಂಡ 47 ಕಿ.ಮೀ., ಮ್ಯಾಕಲದೊಡ್ಡಿ 45 ಕಿ.ಮೀ. ಹಾಗೂ ನಾಗಲಾಪುರ 48 ಕಿ.ಮೀ. ದೂರದಲ್ಲಿವೆ. ಇದರಿಂದ ರೈತರು, ಸಾರ್ವಜನಿಕರು ಹಾಗೂ ಸರ್ಕಾರಿ ಯೋಜನೆಗಳ ಫಲಾನುಭವಿಗಳು ವಿವಿಧ ಕೆಲಸಗಳಿಗಾಗಿ ಅರಕೇರಾಕ್ಕೆ ತೆರಳಿ ಬರಲು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ ಎಂದು ಗ್ರಾಮಸ್ಥರು ಸಭೆಯಲ್ಲಿ ತಿಳಿಸಿದರು.

ದೇವದುರ್ಗ ತಾಲೂಕಿನ ಜಾಲಹಳ್ಳಿ ಹೋಬಳಿ ಈ ಗ್ರಾಮಗಳಿಗೆ ಸಮೀಪದಲ್ಲಿದೆ. ಸೋಮನಮರಡಿಯಿಂದ ಸುಮಾರು 6 ಕಿ.ಮೀ. ಹಾಗೂ ಮ್ಯಾಕಲದೊಡ್ಡಿಯಿಂದ ಕೇವಲ 4 ಕಿ.ಮೀ. ಅಂತರದಲ್ಲಿದೆ. ಹೀಗಾಗಿ ಭೌಗೋಳಿಕ ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಈ ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸುವುದು ಸೂಕ್ತ ಎಂದು ಅಭಿಪ್ರಾಯಪಟ್ಟರು.

ಜಾಲಹಳ್ಳಿಯಲ್ಲಿ ಅಗತ್ಯ ಮೂಲಸೌಕರ್ಯ:

ಜಾಲಹಳ್ಳಿ ಹೋಬಳಿಯಲ್ಲಿ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರ, ಪೊಲೀಸ್ ಠಾಣೆ, ಕಾಲೇಜುಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ಪಶು ಚಿಕಿತ್ಸಾಲಯ, ರೈತ ಸಂಪರ್ಕ ಕೇಂದ್ರ, ವಿದ್ಯುತ್ ಕೇಂದ್ರ ಹಾಗೂ ಬ್ಯಾಂಕಿಂಗ್ ಸೌಲಭ್ಯಗಳಿವೆ. ಅಲ್ಲದೆ, ರಾಷ್ಟ್ರೀಯ ಹೆದ್ದಾರಿ 150ಎ ಮತ್ತು 61 ಸೇರಿದಂತೆ ಪ್ರಮುಖ ರಸ್ತೆ ಸಂಪರ್ಕ ವ್ಯವಸ್ಥೆಯೂ ಇದೆ. ಹೀಗಾಗಿ ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಂಡರೆ ಸಾರ್ವಜನಿಕರಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದು ಗ್ರಾಮಸ್ಥರು ತಿಳಿಸಿದರು.

ಅರಕೇರಾ ಹೊಸ ತಾಲೂಕು ರಚನೆಯ ಸಂದರ್ಭದಲ್ಲಿ ಗ್ರಾಮಸ್ಥರ ಸಮರ್ಪಕ ಜನಾಭಿಪ್ರಾಯ ಸಂಗ್ರಹಿಸದೆ ಈ ಗ್ರಾಮಗಳನ್ನು ಸೇರ್ಪಡೆಗೊಳಿಸಲಾಗಿದೆ. ಇದರಿಂದ ಸರ್ಕಾರಿ ಸೌಲಭ್ಯಗಳನ್ನು ಪಡೆಯಲು ಸಾರ್ವಜನಿಕರು ಅನಗತ್ಯವಾಗಿ ದೂರ ಪ್ರಯಾಣ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಈ ಹಿಂದೆಯೇ ಗ್ರಾಪಂ ಠರಾವು ಅಂಗೀಕಾರ:

ಸೋಮನಮರಡಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಸೇರ್ಪಡೆಗೊಳಿಸುವಂತೆ 24-03-2025ರಂದು ನಡೆದ ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ಈಗಾಗಲೇ ಠರಾವು ಅಂಗೀಕರಿಸಲಾಗಿದೆ. ಇದೀಗ ಮತ್ತೊಮ್ಮೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿ, ಸಭೆಯಲ್ಲಿ ಹಾಜರಿದ್ದ ಗ್ರಾಮಸ್ಥರ ಸಹಿಗಳನ್ನು ಪಡೆದು ಅಧಿಕೃತವಾಗಿ ದಾಖಲಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಸೆಕ್ಷನ್ 4(2)(ಎ) ಹಾಗೂ ಸಂಬಂಧಿತ ಕಾನೂನು ನಿಯಮಗಳ ಅನ್ವಯ ಗ್ರಾಮಗಳ ಭೌಗೋಳಿಕ ಸ್ಥಿತಿಗತಿ, ಸಾರ್ವಜನಿಕರ ಅನುಕೂಲತೆ ಮತ್ತು ಆಡಳಿತಾತ್ಮಕ ಹಿತದೃಷ್ಟಿಯಿಂದ ಐದು ಗ್ರಾಮಗಳನ್ನು ದೇವದುರ್ಗ ತಾಲೂಕಿಗೆ ಮರುಸೇರ್ಪಡೆಗೊಳಿಸಲು ಸಂಬಂಧಪಟ್ಟ ಜಿಲ್ಲಾಡಳಿತ ಹಾಗೂ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದರು.

ಸಭೆಯಲ್ಲಿ ಅರಕೇರಾ ತಹಶೀಲ್ದಾರ್ ಅಮರೇಶ, ತಾಲೂಕು ಪಂಚಾಯಿತಿ ಯೋಜನಾಧಿಕಾರಿ ಅಣ್ಣಾರಾವ್, ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಝಳಕಿ, ಸೋಮನಮರಡಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ಗ್ರಾಮಸ್ಥರಾದ ಬಸಯ್ಯಸ್ವಾಮಿ, ಮಹದೇವ ಯಾದವ್, ವಸಂತ ಕುಮಾರ್ ವಕೀಲರು, ಮೌಲಾಸಾಬ್, ಸಂಗಣ್ಣ, ಬಸವರಾಜ ಗಾಣದಾಳ್ ವಕೀಲರು, ಶಿವು ಪಾಟೀಲ್ ಗಾಣ ದಾಳ್,ಸಾಬಣ್ಣ ಕಮಲದಿನ್ನಿ, ಸಾಬಣ್ಣ ಹೂಗಾರ್, ಸಾಬಣ್ಣ ತಳವಾರ್, ಕರಿಯಪ್ಪ ಮಾಲಿಪಾಟೀಲ್, ಹನುಮಂತ ಬಿಂಗಿ, ಸಾಬಗೌಡ ದುರ್ಗಪ್ಪ, ಬಿ.ಆರ್. ಗುಂಡದ ವೆಂಕಟೇಶ್, ಬಿ.ಆರ್. ಗುಂಡದ ಚನ್ನಬಸವ, ಮ್ಯಾಕಲದೊಡ್ಡಿಯ ನಾಗರಾಜ್, ಶಿವನಗೌಡ ಕಕ್ಕಲದೊಡ್ಡಿ ಸೇರಿದಂತೆ ಐದು ಗ್ರಾಮಗಳ 920ಕ್ಕೂ ಅಧಿಕ ಸಾರ್ವಜನಿಕರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ.

— Khaja Hussain

ದೇವದುರ್ಗದಲ್ಲಿ ರೂ.4.13 ಕೋಟಿ ವೆಚ್ಚದ ಮೌಲಾನಾ ಆಜಾದ್ ಮಾದರಿ ಶಾಲೆ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ - ಶಾಸಕಿ ಕರಿಮ್ಮ ಜಿ. ನಾಯಕ್ ಅವರಿಂದ ಭೂಮಿಪೂಜೆ



ದೇವದುರ್ಗದ ಶೈಕ್ಷಣಿಕ ಇತಿಹಾಸದಲ್ಲಿ ಮತ್ತೊಂದು ಸುವರ್ಣ ಅಧ್ಯಾಯ

ದೇವದುರ್ಗ, ನ. 3: ದೇವದುರ್ಗದ ಶೈಕ್ಷಣಿಕ ಇತಿಹಾಸದಲ್ಲಿ ಮತ್ತೊಂದು ಸುವರ್ಣ ಅಧ್ಯಾಯ ಬರೆಯಲಾಗಿದೆ. ರೂ.4.13 ಕೋಟಿ ವೆಚ್ಚದ ಮೌಲಾನಾ ಆಜಾದ್ ಮಾದರಿ ಶಾಲೆಯ ನೂತನ ಕಟ್ಟಡಕ್ಕೆ ಶಂಕುಸ್ಥಾಪನೆ - ಸಾವಿರಾರು ಕನಸುಗಳಿಗೆ ಹೊಸ ಭರವಸೆ ಮೂಡಿದೆ.

ಒಂದು ಊರಿನ ನಿಜವಾದ ಅಭಿವೃದ್ಧಿ ಕೇವಲ ರಸ್ತೆಗಳು, ಕಟ್ಟಡಗಳಿಂದ ಅಳೆಯುವುದಿಲ್ಲ. ಆ ಊರಿನ ಮಕ್ಕಳು ಪಡೆಯುವ ಶಿಕ್ಷಣದಿಂದ, ಅವರ ಭವಿಷ್ಯದಿಂದ ಹಾಗೂ ಅವರು ಸಾಧಿಸುವ ಯಶಸ್ಸಿನಿಂದ ಅಳೆಯಲಾಗುತ್ತದೆ.

ದೇವದುರ್ಗದ ಪ್ರತಿಯೊಂದು ಮಗುವಿಗೂ ಉತ್ತಮ ಶಿಕ್ಷಣ ಸಿಗಬೇಕು, ಬಡತನವು ಯಾವ ಮಗುವಿನ ಕನಸಿಗೂ ಅಡ್ಡಿಯಾಗಬಾರದು ಎಂಬ ದೃಢ ಸಂಕಲ್ಪದೊಂದಿಗೆ ಕ್ಷೇತ್ರದ ಜನಪ್ರಿಯ ಶಾಸಕರಾದ ಶ್ರೀಮತಿ ಕರಿಮ್ಮ ಜಿ. ನಾಯಕ್ ಅವರು ಇಂದು ಮತ್ತೊಂದು ಮಹತ್ವದ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ಕೆ ಚಾಲನೆ ನೀಡಿದರು.

ದೇವದುರ್ಗ ನಗರದ ವಾರ್ಡ್ ನಂ. 01ರ ಶಂಕರಬಂಡಿ ಕ್ರಾಸ್ ಬಳಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 2025-26ನೇ ಸಾಲಿನ ಯೋಜನೆಯಡಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಮೂಲಕ ಅನುಮೋದನೆಗೊಂಡ ರೂ.413 ಲಕ್ಷ (ರೂ.4.13 ಕೋಟಿ) ಅಂದಾಜು ವೆಚ್ಚದ ಮೌಲಾನಾ ಆಜಾದ್ ಮಾದರಿ ಶಾಲೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಶಂಕುಸ್ಥಾಪನೆ ಮಾಡಿದರು.

ಇದು ಕೇವಲ ರೂ.4.13 ಕೋಟಿಯ ಕಟ್ಟಡವಲ್ಲ. ಇದು ದೇವದುರ್ಗದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಕ್ಕಳ ಉಜ್ವಲ ಭವಿಷ್ಯಕ್ಕೆ ಹಾಕುತ್ತಿರುವ ಭದ್ರ ಬುನಾದಿ ಎಂದು ಈ ಸಂದರ್ಭದಲ್ಲಿ ಶಾಸಕರು ತಿಳಿಸಿದರು.

— Ningappa

ಶಂಕರಬಂಡಿ ಕ್ರಾಸ್ ಬಳಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 2025-26ನೇ ಸಾಲಿನ ಯೋಜನೆಯಡಿ ರಾಜೀವ್ ಗಾಂಧಿ ವಸತಿ ನಿಗಮ ನಿಯಮಿತದ ಮೂಲಕ ಅನುಮೋದನೆಗೊಂಡ ರೂ.413 ಲಕ್ಷ (ರೂ.4.13 ಕೋಟಿ) ಅಂದಾಜು ವೆಚ್ಚದ ಮೌಲಾನಾ ಆಜಾದ್ ಮಾದರಿ ಶಾಲೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಶಂಕುಸ್ಥಾಪನೆ ಮಾಡಿದರು.

ಇದು ಕೇವಲ ರೂ.4.13 ಕೋಟಿಯ ಕಟ್ಟಡವಲ್ಲ. ಇದು ದೇವದುರ್ಗದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ಮಕ್ಕಳ ಉಜ್ವಲ ಭವಿಷ್ಯಕ್ಕೆ ಹಾಕುತ್ತಿರುವ ಭದ್ರ ಬುನಾದಿ ಎಂದು ಈ ಸಂದರ್ಭದಲ್ಲಿ ಶಾಸಕರು ತಿಳಿಸಿದರು.

— Ningappa

CRIME

ವಿಜಯಪುರದಲ್ಲಿ ಪೊಲೀಸ್‌ಗಳು 9.43 ಕೋಟಿ ಮೌಲ್ಯದ ಸ್ವತ್ತು ವಾಪಸ್ ಪಡೆಯುವಲ್ಲಿ ಯಶಸ್ವಿ ಸಾಧನೆ



ವಿಜಯಪುರದಲ್ಲಿ ಪೊಲೀಸ್‌ಗಳು 9.43 ಕೋಟಿ ರೂ. ಮೌಲ್ಯದ ಸ್ವತ್ತು ವಾಪಸ್ ಪಡೆಯುವಲ್ಲಿ ಯಶಸ್ವಿ ಸಾಧನೆ ಮಾಡಿದ್ದಾರೆ.

ಈ ವಾಪಸ್ಸು ಸ್ಥಳೀಯ ಮಾಧ್ಯಮಗಳು ಮತ್ತು ಜನತೆಯ ಗಮನ ಸೆಳೆದಿದೆ. ಪೊಲೀಸ್‌ಗಳ ಈ ಕಾರ್ಯವನ್ನು ಮಂತ್ರಿ ಬಿ. (ಎಂ.ಬಿ.) ಪ್ರಶಂಸಿಸಿದರು.

ಈ ಘಟನೆಗೆ ಸಂಬಂಧಿಸಿದಂತೆ ಪಾಟೀಲರವರು ವಿಡೆಕ್ ಭಾಷಣ ನೀಡಿ, ಕಾನೂನು ಕ್ರಮಗಳ ಮಹತ್ವವನ್ನು ಒತ್ತಿ ಹೇಳಿದರು.

ಅಧಿಕಾರಿಗಳು ಈ ರೀತಿಯ ಕಾರ್ಯಗಳು ಕಾನೂನು ಪಾಲನೆ ಮತ್ತು ಸಾರ್ವಜನಿಕ ವಿಶ್ವಾಸವನ್ನು ಹೆಚ್ಚಿಸುವುದರಲ್ಲಿ ಸಹಾಯಕ ಎಂದು ಹೇಳಿದರು.

— YALLAPPA RAGATE (PATIL)

ಡಿ.ಎಂ. ಮಕಾನದಾರ, ಧರೆಪ್ಪ ಠಕ್ಕನ್ನವರ ಇವರಿಗೆ 'ಸಮಾಜ ಸೇವಾ ರತ್ನ' ಪ್ರಶಸ್ತಿಗೆ ಆಯ್ಕೆ



ಸಮಾಜ ಸೇವಾ ರತ್ನ ಪ್ರಶಸ್ತಿಗೆ ಡಿ.ಎಂ. ಮಕಾನದಾರ, ಧರೆಪ್ಪ ಟಕ್ಕನ್ನವರ ಆಯ್ಕೆ

ಸಮಾಜ ಸೇವೆ, ಸಹಕಾರಿ ಕ್ಷೇತ್ರದ ಕೊಡುಗೆ ಗುರುತಿಸಿ ಗೌರವ | ನ.5ರಂದು ಬೆಳಗಾವಿಯಲ್ಲಿ ಪ್ರಶಸ್ತಿ ಪ್ರದಾನ

ಅಥಣಿ : ಸಮಾಜ ಸೇವೆ, ಸಹಕಾರಿ ಕ್ಷೇತ್ರ ಹಾಗೂ ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಗಮನಾರ್ಹ ಸೇವೆ ಸಲ್ಲಿಸುತ್ತಿರುವ ಅಥಣಿಯ ರಾಷ್ಟ್ರೀಯ ಮಾನವ ಹಕ್ಕುಗಳ ನ್ಯಾಯಾಂಗ ಸುರಕ್ಷಾ ಪರಿಷದ್ ರಾಜ್ಯ ಅಧ್ಯಕ್ಷರಾದ ಡಿ.ಎಂ. ಮಕಾನದಾರ ಹಾಗೂ ರಾಜ್ಯ ಹಿರಿಯ ಉಪಾಧ್ಯಕ್ಷರಾದ ಧರೆಪ್ಪ ಟಕ್ಕನ್ನವರ ಅವರು ಡಿಜಿಟಲ್ ಮೀಡಿಯಾ ಅಸೋಸಿಯೇಷನ್ ಆಫ್ ಕರ್ನಾಟಕ ವತಿಯಿಂದ ನೀಡಲಾಗುವ ಪ್ರತಿಷ್ಠಿತ ‘ಸಮಾಜ ಸೇವಾ ರತ್ನ’ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಸಲ್ಲಿಸುತ್ತಿರುವ ಹಾಗೂ ಸಾಮಾಜಿಕ ಬದ್ಧತೆಯಿಂದ ವಿವಿಧ ಜನಪರ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಕಾರ್ಯಕರ್ತರನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಸಮಾಜ ಸೇವೆ ಮತ್ತು ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಕೊಡುಗೆ, ವಿವಿಧ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ ಹಾಗೂ ಸಂಘಟನಾ ಕಾರ್ಯಕ್ಷಮತೆಯನ್ನು ಪರಿಗಣಿಸಿ ಡಿ.ಎಂ. ಮಕಾನದಾರ ಮತ್ತು ಧರೆಪ್ಪ ಟಕ್ಕನ್ನವರ ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಡಿಜಿಟಲ್ ಮೀಡಿಯಾ ಅಸೋಸಿಯೇಷನ್ ಆಫ್ ಕರ್ನಾಟಕದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ನವೆಂಬರ್ 5ರಂದು ಬೆಳಗಾವಿಯಲ್ಲಿ ನಡೆಯಲಿರುವ ವಿಶೇಷ ಸಮಾರಂಭದಲ್ಲಿ ಇಬ್ಬರಿಗೂ ‘ಸಮಾಜ ಸೇವಾ ರತ್ನ’ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಿಜಿಟಲ್ ಮೀಡಿಯಾ ಅಸೋಸಿಯೇಷನ್ ಆಫ್ ಕರ್ನಾಟಕದ ಅಧ್ಯಕ್ಷ ಡಾ. ಸುನಿಲ್ ಕುಂಬಾರ ಅವರು ವಹಿಸಲಿದ್ದಾರೆ.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುವ ವ್ಯಕ್ತಿಗಳನ್ನು ಗುರುತಿಸಿ ಗೌರವಿಸುವ ಮೂಲಕ ಮತ್ತಷ್ಟು ಜನಪರ ಕಾರ್ಯಗಳಿಗೆ ಪ್ರೇರಣೆ ನೀಡುವುದು ಪ್ರಶಸ್ತಿಯ ಪ್ರಮುಖ ಉದ್ದೇಶವಾಗಿದೆ. ಸಮಾಜ ಸೇವೆ ಹಾಗೂ ಸಹಕಾರಿ ಕ್ಷೇತ್ರದಲ್ಲಿ ನಿರಂತರವಾಗಿ ಶ್ರಮಿಸುವ ಕಾರ್ಯಕರ್ತರ ಸೇವೆಯನ್ನು ಸಾರ್ವಜನಿಕವಾಗಿ ಗುರುತಿಸಿ ಗೌರವಿಸುವುದರಿಂದ ಅವರಲ್ಲಿ ಇನ್ನಷ್ಟು ಉತ್ಸಾಹ, ಆತ್ಮವಿಶ್ವಾಸ ಹಾಗೂ ಸಾಮಾಜಿಕ ಜವಾಬ್ದಾರಿಯ ಮನೋಭಾವ ಮೂಡುತ್ತದೆ ಎಂದು ಸಂಘಟನೆಯ ಪದಾಧಿಕಾರಿಗಳು ತಿಳಿಸಿದ್ದಾರೆ. ಡಿ.ಎಂ. ಮಕಾನದಾರ ಹಾಗೂ ಧರೆಪ್ಪ ಟಕ್ಕನ್ನವರ ಅವರ ಆಯ್ಕೆಗೆ ಅಥಣಿ ತಾಲೂಕಿನ ವಿವಿಧ ಸಂಘ-ಸಂಸ್ಥೆಗಳ ಪದಾಧಿಕಾರಿಗಳು, ಸಮಾಜ ಸೇವಕರು, ಸಹಕಾರಿ ಕ್ಷೇತ್ರದ ಮುಖಂಡರು ಹಾಗೂ ಸ್ನೇಹಿತರು ಅಭಿನಂದನೆ ಸಲ್ಲಿಸಿದ್ದಾರೆ.

— Manojkumar Patole

ರಾಯಚೂರು ರಿಮ್ಸ್ ಆಸ್ಪತ್ರೆಯಲ್ಲಿ ಸ್ವಚ್ಛತಾ ಹೀ ಸೇವಾ ಜಾಗೃತಿ - ವಾರ್ಡ್ 29 ರಲ್ಲಿ ನಾಲ್ಕು ವಿಧದ ಕಸ ವಿಂಗಡಣೆ ಬಗ್ಗೆ ಅರಿವು



ರಾಯಚೂರು ರಿಮ್ಸ್ ಆಸ್ಪತ್ರೆಯಲ್ಲಿ ಸ್ವಚ್ಛತಾ ಹೀ ಸೇವಾ ಅಭಿಯಾನ

ರಾಯಚೂರು, ನ. 3: ಸ್ವಚ್ಛತೆಯೇ ಸೇವೆ (ಸ್ವಚ್ಛತಾ ಹೀ ಸೇವಾ) ಅಭಿಯಾನದ ಅಂಗವಾಗಿ ಇಂದು ನಗರದ ವಾರ್ಡ್ ನಂಬರ್ 29ರ ಎಲ್ ಬಿಎಸ್ ನಗರದ ರಿಮ್ಸ್ ಆಸ್ಪತ್ರೆಯಲ್ಲಿ ಜಾಗೃತಿ ಅಭಿಯಾನವನ್ನು ಆಯೋಜಿಸಲಾಗಿತ್ತು.


ರೋಗಿಗಳ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಶ್ರಮಿಸುತ್ತಿರುವ ಶುಶ್ರೂಷಕಿಯರು ಹಾಗೂ ವೈದ್ಯಾಧಿಕಾರಿಗಳ ಸಮ್ಮುಖದಲ್ಲಿ ಜರುಗಿದ ಅಭಿಯಾನದಲ್ಲಿ ನಾಲ್ಕು ತರದ ಕಸ ವಿಂಗಡಣೆ ಹಾಗೂ ಪ್ರಮುಖವಾಗಿ ಆಸ್ಪತ್ರೆಗಳಂತಹ ಸೂಕ್ಷ್ಮ ಪ್ರದೇಶದಲ್ಲಿ ಅಪಾಯಕಾರಿ ತ್ಯಾಜ್ಯ ವಿಂಗಡಣೆ ಕುರಿತು ಅರಿವು ಮೂಡಿಸಲಾಯಿತು.

ವೈದ್ಯರು ಹಾಗೂ ಶುಶ್ರೂಷಕಿಯರು ತಮ್ಮ ದಿನನಿತ್ಯದ ಜೀವನದಲ್ಲಿ ಅನೇಕ ವಿಧದ ಜೈವಿಕ ಹಾಗೂ ರಾಸಾಯನಿಕ ತ್ಯಾಜ್ಯದ ಸಮಸ್ಯೆಯನ್ನು ಎದುರಿಸುತ್ತಾರೆ. ಇದನ್ನು ಮೂಲದಲ್ಲಿಯೇ ಸಂಗ್ರಹಿಸಿ ಬೇರ್ಪಡಿಸಿ ನೂತನ ಘನತ್ಯಾಜ್ಯ ನಿರ್ವಹಣೆಯಲ್ಲಿ ಹೊಸತಾಗಿ ಜಾರಿಯಾಗಿರುವ ನಾಲ್ಕು ವಿಧದ ಕಸ ವಿಂಗಡಣೆಯ ಕುರಿತು ಪಾಲಿಕೆಯ ಘನತ್ಯಾಜ್ಯ ನಿರ್ವಹಣಾ ತಜ್ಞ ಎಂಡಿ ಶಫಿ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ರಿಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿಯಾದ ಶ್ರೀ ಬಸವರಾಜ ಹಾಗೂ ಆಸ್ಪತ್ರೆಯ ಹಾಗೂ ಪಾಲಿಕೆಯ ಸಿಬ್ಬಂದಿಗಳು ಹಾಜರಿದ್ದರು.

— Ningappa

ಕಾರ್ಮಿಕರಿಗೆ ಉಚಿತ ಕಣ್ಣಿನ ತಪಾಸಣೆ - ಮಹಾನಗರ ಪಾಲಿಕೆ ಹಾಗೂ ಡಾ. ಅಗರವಾಲ್ ಆಸ್ಪತ್ರೆ ಸಹಯೋಗದಲ್ಲಿ ಶಿಬಿರ



ರಾಯಚೂರಿನಲ್ಲಿ ಪೌರ ಕಾರ್ಮಿಕರಿಗೆ ಉಚಿತ ಕಣ್ಣಿನ ತಪಾಸಣಾ ಶಿಬಿರ*

ರಾಯಚೂರು, ನ. 3: *ರಾಯಚೂರು ಮಹಾನಗರ ಪಾಲಿಕೆ ಹಾಗೂ ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ* ವತಿಯಿಂದ ನಗರದ *ಮಹಿಳಾ ಸಮಾಜದಲ್ಲಿ* ಪಾಲಿಕೆಯ *ಸ್ವಚ್ಛತಾ ಸಹಕಾರ್ಮಿಕರು ಹಾಗೂ ಸಿಬ್ಬಂದಿಗೆ ಕಣ್ಣಿನ ತಪಾಸಣಾ ಶಿಬಿರ* ನಡೆಸಲಾಯಿತು.

ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಯ ಸಹಯೋಗದಲ್ಲಿ ಸಿಬ್ಬಂದಿಗೆ *ಕಣ್ಣಿನ ಪೊರೆ (Cataract), ಗ್ಲುಕೋಮಾ, ರೆಟಿನಾ, ಕಾರ್ನಿಯಾ* ಮತ್ತು ಇನ್ನೂ ಅನೇಕ ಕಣ್ಣಿನ ತೊಂದರೆಗಳಿಗೆ ಸಂಬಂಧಿಸಿದಂತೆ ಸಮಗ್ರ ತಪಾಸಣೆ ನಡೆಸಿ, ಕಣ್ಣಿನ ಚಿಕಿತ್ಸೆಗೆ ಅಗತ್ಯ ಸಲಹೆ ಸೂಚನೆಗಳನ್ನು ನೀಡಲಾಯಿತು.

ದಿನನಿತ್ಯ ಕಸ, ಧೂಳಿನ ನಡುವೆ ನಗರ ಸ್ವಚ್ಛತೆಗೆ ಶ್ರಮಿಸುವ ಪೌರ ಕಾರ್ಮಿಕರ ಕಣ್ಣಿನ ಆರೋಗ್ಯ ಕಾಪಾಡುವ ಉದ್ದೇಶದಿಂದ ಈ ಶಿಬಿರ ಆಯೋಜಿಸಲಾಗಿತ್ತು. ಶಿಬಿರದಲ್ಲಿ ನೂರಾರು ಕಾರ್ಮಿಕರು ಕಣ್ಣಿನ ತಪಾಸಣೆ ಮಾಡಿಸಿಕೊಂಡರು.

ಈ ಸಂದರ್ಭದಲ್ಲಿ *ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆಯ ವೈದ್ಯರು, ಪಾಲಿಕೆಯ ವಲಯ ಆಯುಕ್ತರಾದ ಶ್ರೀ ಮಲ್ಲಿಕಾರ್ಜುನ ಬಿ.ಎಂ, ಉಪಾಯುಕ್ತರಾದ ಶ್ರೀ ಮುರಳೀಧರ (ಆಡಳಿತ)*, ಪಾಲಿಕೆಯ ಸಿಬ್ಬಂದಿಗಳು ಹಾಜರಿದ್ದರು.

ಪಾಲಿಕೆಯ ಈ ಕಾರ್ಯಕ್ಕೆ ಸಿಬ್ಬಂದಿ ವರ್ಗ ಮೆಚ್ಚುಗೆ ವ್ಯಕ್ತಪಡಿಸಿದೆ.

— Ningappa

ಕನ್ನಡ ರಾಜ್ಯೋತ್ಸವದ ಧ್ವಜಾರೋಹಣಕ್ಕೆ ಅಗೌರವ: ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಕರವೇ ಆಗ್ರಹ ### ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ಲಕ್ಷ್ಯದ ವಿರುದ್ಧ ತಹಸೀಲ್ದಾರ್‌ಗೆ ಮನವಿ



ದೇವದುರ್ಗ | ಬ್ರೇಕಿಂಗ್ ನ್ಯೂಸ್

ಕನ್ನಡ ರಾಜ್ಯೋತ್ಸವದ ಧ್ವಜಾರೋಹಣಕ್ಕೆ ಅಗೌರವ: ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಕರವೇ ಆಗ್ರಹ

ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ಲಕ್ಷ್ಯದ ವಿರುದ್ಧ ತಹಸೀಲ್ದಾರ್‌ಗೆ ಮನವಿ

ದೇವದುರ್ಗ, ನ. 3: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ 71ನೇ ಕನ್ನಡ ರಾಜ್ಯೋತ್ಸವ ಆಚರಣೆಗೆ ಸಂಬಂಧಿಸಿದಂತೆ ನಿರ್ಲಕ್ಷ್ಯ ತೋರಿದವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆಯ ದೇವದುರ್ಗ ತಾಲೂಕು ಘಟಕದ ಪದಾಧಿಕಾರಿಗಳು ತಹಸೀಲ್ದಾರ್ ಅವರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಜಾಲಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಕನ್ನಡಾಂಬೆಯ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವುದು ಹಾಗೂ ಧ್ವಜಾರೋಹಣ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಸಂಘದ ಆಡಳಿತ ಮಂಡಳಿ ನಿರ್ಲಕ್ಷ್ಯ ವಹಿಸಿದೆ ಎಂದು ಕರವೇ ಪದಾಧಿಕಾರಿಗಳು ಆರೋಪಿಸಿದ್ದಾರೆ.

ಭಾಷೆಯ ಗೌರವವನ್ನು ಎತ್ತಿಹಿಡಿಯುವುದು ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯವಾಗಿದೆ. ಕರ್ನಾಟಕ ರಾಜ್ಯೋತ್ಸವವು ನಾಡಿನ ಹೆಮ್ಮೆಯ ಸಂಕೇತವಾಗಿದ್ದು, ಇಂತಹ ಮಹತ್ವದ ದಿನದಂದು ರಾಜ್ಯೋತ್ಸವ ಆಚರಣೆಯಲ್ಲಿ ನಿರ್ಲಕ್ಷ್ಯ ತೋರುವುದು ಹಾಗೂ ಕನ್ನಡ ಧ್ವಜಾರೋಹಣಕ್ಕೆ ಅಗೌರವ ತೋರುವುದು ಖಂಡನೀಯ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಕಚೇರಿಗಳು ಹಾಗೂ ಸಹಕಾರ ಸಂಘಗಳಲ್ಲಿ ಕನ್ನಡ ರಾಜ್ಯೋತ್ಸವವನ್ನು ಗೌರವಯುತವಾಗಿ ಆಚರಿಸಬೇಕು. ಕನ್ನಡ ನಾಡು-ನುಡಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ನಿರ್ಲಕ್ಷಿಸುವವರ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಇಂತಹ ಘಟನೆಗಳು ಮುಂದಿನ ದಿನಗಳಲ್ಲಿ ಮರುಕಳಿಸದಂತೆ ಅಗತ್ಯ ಎಚ್ಚರಿಕೆ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆಯ ತಾಲೂಕು ಅಧ್ಯಕ್ಷ ನಂದಪ್ಪ ಪಿ. ಮಡ್ಡಿ, ತಾಲೂಕು ಸಂಚಾಲಕ ಭೀಮಣ್ಣ ನಾಯಕ, ಜಾಲಹಳ್ಳಿ ಹೋಬಳಿ ಕರವೇ ಅಧ್ಯಕ್ಷ ತಮ್ಮಣ್ಣ ಹೆರುಂಡಿ ಸೇರಿದಂತೆ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

— Khaja Hussain

ದೇವದುರ್ಗದಲ್ಲಿ 71ನೇ ಕನ್ನಡ ರಾಜ್ಯೋತ್ಸವ ಆಚರಣೆಗೆ ನಿರ್ಲಕ್ಷ್ಯ - ಅಗೌರವ ತೋರಿದವರ ವಿರುದ್ಧ ಕ್ರಮಕ್ಕೆ ಕರ್ನಾಟಕ ರಕ್ಷಣಾ ವೇದಿಕೆ (ನಾರಾಯಣಗೌಡ್ರು ಬಣ) ಆಗ್ರಹ - ತಹಶೀಲ್ದಾರ್ ಗೆ ಮನವಿ



ದೇವದುರ್ಗದಲ್ಲಿ ರಾಜ್ಯೋತ್ಸವ ಆಚರಣೆಗೆ ನಿರ್ಲಕ್ಷ್ಯ ಆರೋಪ - ಕ್ರಮಕ್ಕೆ ಕರವೇ ಆಗ್ರಹ

ದೇವದುರ್ಗ, ನ. 3: 71ನೇ ಕರ್ನಾಟಕ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಅಗೌರವ ತೋರಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ (ಟಿ.ಎ. ನಾರಾಯಣಗೌಡ್ರು ಬಣ), ತಾಲೂಕು ಘಟಕ, ದೇವದುರ್ಗ ಹಾಗೂ ಜಾಲಹಳ್ಳಿ ಹೋಬಳಿ ಘಟಕದ ವತಿಯಿಂದ ತಹಶೀಲ್ದಾರ್, ದೇವದುರ್ಗ ಅವರಿಗೆ ಮಂಗಳವಾರ ಮನವಿ ಸಲ್ಲಿಸಲಾಗಿದೆ.

ಮನವಿಯಲ್ಲಿ ತಿಳಿಸಿರುವಂತೆ, ಮೇಲ್ನೋಟ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ರಕ್ಷಣಾ ವೇದಿಕೆ ಟಿ.ಎ. ನಾರಾಯಣಗೌಡ್ರು ಬಳಗ ದೇವದುರ್ಗ ತಾಲೂಕು ಘಟಕ ಹಾಗೂ ಜಾಲಹಳ್ಳಿ ಹೋಬಳಿ ಘಟಕದ ಪದಾಧಿಕಾರಿಗಳು ಈ ಮೂಲಕ ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಗ್ರಾಮ ಪಂಚಾಯಿತಿ,ಜಾಲಹಳ್ಳಿ ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ, 71ನೇ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಸರ್ಕಾರದ ಮಾರ್ಗಸೂಚಿ ಹಾಗೂ ಆದೇಶಗಳಿದ್ದರೂ, ಸಂಘದ ವತಿಯಿಂದ ರಾಜ್ಯದಾದ್ಯಂತ ಸ್ವಾಭಿಮಾನಕ್ಕಾಗಿ ಕನ್ನಡ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿದಾಗ ನಿರ್ಲಕ್ಷ್ಯ ತೋರಲಾಗಿದೆ ಎಂದು ಆರೋಪಿಸಲಾಗಿದೆ.

ಕನ್ನಡ ನಾಡು, ನುಡಿ, ನೆಲ, ಜಲ ಹಾಗೂ ಭಾಷೆಯ ಗೌರವದ ಸಂಕೇತವಾಗಿರುವ ಕನ್ನಡ ರಾಜ್ಯೋತ್ಸವದ ಧ್ವಜಾರೋಹಣ ಕಾರ್ಯಕ್ರಮಕ್ಕೆ ಅಗೌರವ ತೋರುವುದು ಕನ್ನಡಪರ ಸಂಘಟನೆಗಳಿಗೆ ತೀವ್ರ ನೋವುಂಟು ಮಾಡಿದೆ. ಆದ್ದರಿಂದ, ಈ ಪ್ರಕರಣದ ಕುರಿತು ಸೂಕ್ತ ತನಿಖೆ ನಡೆಸಿ, ಕರ್ತವ್ಯ ಲೋಪ ಎಸಗಿರುವ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜವಾಬ್ದಾರಿಯುತ ವ್ಯಕ್ತಿಗಳ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಬೇಕು. ತಪ್ಪಿತಸ್ಥರೆಂದು ಸಾಬೀತಾದಲ್ಲಿ ಅಮಾನತುಗೊಳಿಸುವಂತೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಶಿಫಾರಸು ಮಾಡಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ತಾಲೂಕು ಘಟಕ ಹಾಗೂ ಜಾಲಹಳ್ಳಿ ಹೋಬಳಿ ಘಟಕವು ಆಗ್ರಹಿಸಿದೆ.

ಕಾರ್ಯಕ್ರಮಕ್ಕೆ ಮುಂದಿನ ದಿನಗಳಲ್ಲಿ ಯಾವುದೇ ರೀತಿಯ ಅಗೌರವ ಉಂಟಾಗದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಮನವಿಯಲ್ಲಿ ವಿನಮ್ರವಾಗಿ ಮನವಿ ಮಾಡಿಕೊಳ್ಳಲಾಗಿದೆ.

ಇದೇ ಸಂದರ್ಭದಲ್ಲಿ ಗುರುನಾಥರೆಡ್ಡಿ ಎಮ್ (ತಾ. ಕಾರ್ಯದರ್ಶಿ), ಭೀಮೇಶ್ ನಾಯಕ (ತಾ. ಸಂಚಾಲಕರು), ತಮ್ಮಣ್ಣ ಹೆಸರೇಡಿ (ಜಾ.ಹೋ. ಅಧ್ಯಕ್ಷರು), ನಂದ್ರಪ್ಪ ಪಿ ಮಟ್ಟಿ (ತಾಲೂಕು ಅಧ್ಯಕ್ಷರು ದೇವದುರ್ಗ) ಇದ್ದರು.

— Ningappa

POLITICS

ಪ್ರಜಾಪ್ರಭುತ್ವ ಮತ್ತು ಅರಾಜಕತೆಯನ್ನು ಸಂರಕ್ಷಿಸುವ ಪಾದಯಾತ್ರೆ ಆಯೋಜನೆ



ಪ್ರಜಾಪ್ರಭುತ್ವ ಮತ್ತು ಅರಾಜಕತೆಯನ್ನು ಸಂರಕ್ಷಿಸುವ ಉದ್ದೇಶದಿಂದ ವಿವಿಧ ಸಂಘಟನೆಗಳು ಹಾಗೂ ನಾಗರಿಕರು ಪಾದಯಾತ್ರೆ ಆರಂಭಿಸಿದ್ದಾರೆ. ಈ ಪಾದಯಾತ್ರೆಯಲ್ಲಿ 'ಪ್ರಜಾಪ್ರಭುತ್ವವನ್ನು ಉಳಿಸಿ, ಅರಾಜಕತೆಯನ್ನು ಉಳಿಸಿ' ಎಂಬ ನುಡಿಯನ್ನು ಹತ್ತಿಕೊಂಡು ಜನಸಮೂಹವು ಹಾದುಹೋಗಿದೆ.

ಪಾದಯಾತ್ರೆಗಾರರು ತಮ್ಮ ಅಭಿಪ್ರಾಯವನ್ನು ಶಾಂತಿಯುತವಾಗಿ ವ್ಯಕ್ತಪಡಿಸಲು, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಸ್ವತಂತ್ರ ಚಿಂತನೆಯ ಮಹತ್ವವನ್ನು ಪುನಃ ಒತ್ತಿಹೇಳುವ ಉದ್ದೇಶದಿಂದ ಈ ಕ್ರಮ ಕೈಗೊಂಡಿದ್ದಾರೆ. ಅವರು ಪ್ರಜಾಪ್ರಭುತ್ವದ ಪ್ರಕ್ರಿಯೆಗಳಿಗೆ ಬೆಂಬಲ ನೀಡುವುದರ ಜೊತೆಗೆ, ಸಾಮಾಜಿಕ ಅಸಮತೋಲನಗಳ ಬಗ್ಗೆ ಜಾಗೃತಿಯನ್ನು ಹೆಚ್ಚಿಸುವುದನ್ನು ಕೂಡ ಗುರಿ ಇಟ್ಟಿದ್ದಾರೆ.

ಈ ಪಾದಯಾತ್ರೆ ಯಾವುದೇ ಹಿಂಸಾತ್ಮಕ ಕಾರ್ಯವಿಲ್ಲದೆ, ಕಾನೂನು ಮತ್ತು ಶಾಂತಿಯುತ ಮಾರ್ಗದಲ್ಲಿ ನಡೆಸಲ್ಪಟ್ಟಿದೆ. ಪಾಲ್ಗೊಂಡವರು ತಮ್ಮ ಹಕ್ಕುಗಳ ರಕ್ಷಣೆಗೆ ಮತ್ತು ಜನರ ಸ್ವಾತಂತ್ರ್ಯವನ್ನು ಉಳಿಸುವ ಮಹತ್ವವನ್ನು ಪುನಃ ನೆನಪಿಸಲು ಈ ಕ್ರಮವನ್ನು ಆಯೋಜಿಸಿದ್ದಾರೆ.

ಸ್ಥಳೀಯ ಅಧಿಕಾರಿಗಳು ಪಾದಯಾತ್ರೆಯ ಶಾಂತ ಸ್ವಭಾವವನ್ನು ಗಮನಿಸಿ, ಸಾರ್ವಜನಿಕ ಸುರಕ್ಷತೆಯನ್ನು ಖಾತ್ರಿಪಡಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದ್ದಾರೆ. ಈ ಪಾದಯಾತ್ರೆ ಪ್ರಜಾಪ್ರಭುತ್ವ ಮತ್ತು ಸ್ವತಂತ್ರ ಅಭಿವ್ಯಕ್ತಿಯ ಹಕ್ಕುಗಳ ಬಗ್ಗೆ ಸಾರ್ವಜನಿಕ ಚರ್ಚೆಗೆ ಪ್ರೇರಣೆ ನೀಡುವ ನಿರೀಕ್ಷೆ ಇದೆ.

— Shivappa

ಕಾರ್ಮಿಕರಿಗೆ 42 ಸಾವಿರ ಕನಿಷ್ಠ ವೇತನಕ್ಕೆ ಆಗ್ರಹ - ದೆಹಲಿ ಚಲೋ ಹೋರಾಟದ ಅಂಗವಾಗಿ ಜಾಲಹಳ್ಳಿಯಲ್ಲಿ CITU ನಿಂದ ಪೋಸ್ಟರ್ ಬಿಡುಗಡೆ



ದೇವದುರ್ಗ/ಜಾಲಹಳ್ಳಿ , ನ. 3:ಕಾರ್ಮಿಕರಿಗೆ 42 ಸಾವಿರ ಕನಿಷ್ಠ ವೇತನ ಜಾರಿಗೆ ಒತ್ತಾಯಿಸಿ, ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳ ರದ್ದತಿಗಾಗಿ ಆಗ್ರಹಿಸಿ ರಾಷ್ಟ್ರವ್ಯಾಪಿ ಹೋರಾಟಕ್ಕೆ CITU (Centre of Indian Trade Unions) ಕರೆ ನೀಡಿದೆ.

ಇದರ ಭಾಗವಾಗಿ ಡಿಸೆಂಬರ್ 1 ರಿಂದ ನಡೆಯಲಿರುವ ದೆಹಲಿ ಚಲೋ ಹೋರಾಟದ ಪೂರ್ವಭಾವಿಯಾಗಿ ಇಂದು ಜಾಲಹಳ್ಳಿಯಲ್ಲಿ CITU ಸಂಘಟನೆಯ ನೇತೃತ್ವದಲ್ಲಿ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಪೂಜಾರಿ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನಾಲ್ಕು ಕಾರ್ಮಿಕ ಸಂಹಿತೆಗಳು ಕಾರ್ಮಿಕ ವಿರೋಧಿಯಾಗಿವೆ. ಅವುಗಳನ್ನು ಕೂಡಲೇ ರದ್ದುಪಡಿಸಬೇಕು. ಯೋಜನಾ ಕಾರ್ಮಿಕರಿಗೆ (Scheme Workers - ಅಂಗನವಾಡಿ, ಆಶಾ, ಬಿಸಿಯೂಟ,ಪಂಚಾಯತಿ ನೌಕರರು) ಕನಿಷ್ಠ ವೇತನ ನಿಗದಿ ಮಾಡಬೇಕು, ಗುತ್ತಿಗೆ ಕಾರ್ಮಿಕ ಪದ್ಧತಿಯನ್ನು ರದ್ದುಪಡಿಸಿ ಎಲ್ಲಾ ಕಾರ್ಮಿಕರನ್ನು ಖಾಯಂ ಮಾಡಬೇಕು ಮತ್ತು ಕನಿಷ್ಠ 21 ಸಾವಿರ ರೂ. ಪಿಂಚಣಿ ನಿಗದಿಪಡಿಸಬೇಕು ಎಂದು ಒತ್ತಾಯಿಸಿದರು.

ಬೆಲೆ ಏರಿಕೆಗೆ ಅನುಗುಣವಾಗಿ ಕಾರ್ಮಿಕರಿಗೆ ತಿಂಗಳಿಗೆ 42,000 ರೂ. ಕನಿಷ್ಠ ವೇತನ ನೀಡಬೇಕು ಎಂಬುದು ಪ್ರಮುಖ ಬೇಡಿಕೆಯಾಗಿದೆ. ದೆಹಲಿ ಚಲೋ ಹೋರಾಟದಲ್ಲಿ ಕರ್ನಾಟಕದಿಂದ ಸಾವಿರಾರು ಕಾರ್ಮಿಕರು ಭಾಗವಹಿಸಲಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ನಾಗರಾಜ,ರಂಗನಾಥ, ಧರ್ಮಣ್ಣ,ರಾಜು,ರಂಗಪ್ಪ,ಕಾಶಿ,ಸೈದಾಬಿ ಸೇರಿದಂತೆ ಇತರರು ಇದ್ದರು.

— Ningappa

CRIME

ನಟ ಧನ್ವೀರ್ ವಿರುದ್ಧ ಮಾನಹಾನಿ ಮೊಕದ್ದಮೆ, ವಿಜಯಲಕ್ಷ್ಮಿ ದರ್ಶನ್ ಕೋರ್ಟ್‌ನಲ್ಲಿ ದಾಖಲಿಸಿದರು



ವಿಜಯಲಕ್ಷ್ಮಿ ದರ್ಶನ್, ನಟ ಧನ್ವೀರ್ ವಿರುದ್ಧ ಮಾನಹಾನಿ ಮೊಕದ್ದಮೆ ದಾಖಲಿಸಿ ಕೋರ್ಟ್‌ನಲ್ಲಿ ಹಾಜರಾಗಿದ್ದಾರೆ. ಈ ಮೊಕದ್ದಮೆ, ಧನ್ವೀರ್ ನಟ ದರ್ಶನ್ ಕುಟುಂಬದ ಸದಸ್ಯರ ಬಗ್ಗೆ ಅವಹೇಳನಕಾರಿ ಮಾತುಗಳಿರುವುದನ್ನು ಆರೋಪಿಸುವುದನ್ನು ಆಧರಿಸಿದೆ.

ವಿಜಯಲಕ್ಷ್ಮಿ ದರ್ಶನ್ ಪ್ರಕಾರ, ಧನ್ವೀರ್ ನಟ ದರ್ಶನ್ ಕುಟುಂಬದ ವಿರುದ್ಧ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಮತ್ತು ಇದರಿಂದ ಕುಟುಂಬದ ಗೌರವ ಹಾನಿಗೊಳಗಾಗಿದೆ. ಈ ಆರೋಪದ ಪ್ರಕಾರ, ಕಾನೂನು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸುವ ಮೂಲಕ, ವಿಜಯಲಕ್ಷ್ಮಿ ದರ್ಶನ್ ನ್ಯಾಯಾಲಯದಿಂದ ಧನ್ವೀರ್ ನಟನಿಂದ ಹಾನಿಗೊಳಗಾದ ಗೌರವದ ಪರಿಹಾರ ಮತ್ತು ಸಾರ್ವಜನಿಕ ಕ್ಷಮಾಪಣೆಯನ್ನು ಬೇಡುತ್ತಿದ್ದಾರೆ.

— Ganesh S

SPORTS

ಹುಬ್ಬಳ್ಳಿಯ 1 ವರ್ಷ 8 ತಿಂಗಳ ಮಗು ಸುವಿಕ್ಷಾ ಟ್ರೆಡ್‌ಮಿಲ್‌ನಲ್ಲಿ 600 ಮೀಟರ್ 9 ನಿಮಿಷ 27 ಸೆಕೆಂಡುಗಳಲ್ಲಿ ಮುನ್ನಡೆದು ರಾಷ್ಟ್ರೀಯ ದಾಖಲೆ ಸಾಧಿಸಿದೆ



ಹುಬ್ಬಳ್ಳಿಯ 1 ವರ್ಷ 8 ತಿಂಗಳ ಮಗು ಸುವಿಕ್ಷಾ, ಟ್ರೆಡ್‌ಮಿಲ್‌ನಲ್ಲಿ 600 ಮೀಟರ್ ದೂರವನ್ನು 9 ನಿಮಿಷ 27 ಸೆಕೆಂಡುಗಳಲ್ಲಿ ಮುಗಿಸಿ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ರಾಷ್ಟ್ರೀಯ ದಾಖಲೆ ಸ್ಥಾಪಿಸಿದೆ.


ಈ ಸಾಧನೆ ಕೇವಲ 20 ತಿಂಗಳ ವಯಸ್ಸಿನ ಮಗು ಮಾಡಿರುವುದರಿಂದ ದೇಶದ ಕ್ರೀಡಾ ಕ್ಷೇತ್ರದಲ್ಲಿ ವಿಶೇಷ ಗಮನ ಸೆಳೆಯುತ್ತಿದೆ. ದಾಖಲೆ ಪ್ರಕ್ರಿಯೆ ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್‌ನ ಮಾನದಂಡಗಳ ಪ್ರಕಾರ ಪರಿಶೀಲಿಸಿ ದೃಢೀಕರಿಸಲಾಯಿತು. ಮೂಲಕ ಯುವ ಕ್ರೀಡಾಪಟುಗಳಿಗೆ ಪ್ರೇರಣೆ ನೀಡಿದ್ದು, ಸ್ಥಳೀಯ ಕ್ರೀಡಾ ಸಮುದಾಯದಲ್ಲಿ ಉಲ್ಲಾಸದ ವಾತಾವರಣವನ್ನು ಸೃಷ್ಟಿಸಿದೆ. ಈ ಸಾಧನೆ ಕ್ರೀಡಾ ತರಬೇತಿ ಮತ್ತು ಮಕ್ಕಳ ಶಾರೀರಿಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೊಸ ಪ್ರೇರಣೆ ನೀಡುತ್ತದೆ.

ರಾಷ್ಟ್ರೀಯ ಮಟ್ಟದ ಈ ದಾಖಲೆಗೆ ಸಂಬಂಧಿಸಿದ ಅಧಿಕೃತ ಪ್ರಮಾಣಪತ್ರವನ್ನು ಇಂಡಿಯಾ ಬುಕ್ ಆಫ್ ರೆಕಾರ್ಡ್ಸ್ ನೀಡಿದೆ, ಮತ್ತು ಇದನ್ನು ಮುಂದಿನ ಕ್ರೀಡಾ ಸ್ಪರ್ಧೆಗಳಲ್ಲಿ ಮೌಲ್ಯಮಾಪನ ಮಾಡಲು ಬಳಸಲಾಗುತ್ತದೆ.

— Ganesh S

CRIME

ಅಂಕೋಲಾ ‘ಲಾಕ್ ಹೌಸ್ ಬೀಟ್’ ಯಶಸ್ವಿ, 5 ತಿಂಗಳಲ್ಲಿ ಮನೆ ಕಳ್ಳತನ ಇಲ್ಲ



ಅಂಕೋಲಾ ಪೊಲೀಸ್‌ಗಳ ‘ಲಾಕ್ ಹೌಸ್ ಬೀಟ್’ ಅಭಿಯಾನವು ಹೊಸ ವಾಟ್ಸ್‌ಆ್ಯಪ್ ಆಧಾರಿತ ಭದ್ರತಾ ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಕಳೆದ ಐದು ತಿಂಗಳಲ್ಲಿ ಅಂಕೋಲಾ ವ್ಯಾಪ್ತಿಯಲ್ಲಿ ಒಂದೂ ಮನೆ ಕಳ್ಳತನ ಪ್ರಕರಣ ದಾಖಲೆಯಾಗಿಲ್ಲ.

ಈ ವ್ಯವಸ್ಥೆಯಲ್ಲಿ ನಿವಾಸಿಗಳು ತಮ್ಮ ಮನೆಗಳ ಭದ್ರತಾ ಮಾಹಿತಿಯನ್ನು ವಾಟ್ಸ್‌ಆ್ಯಪ್ ಗುಂಪುಗಳಲ್ಲಿ ಹಂಚಿಕೊಳ್ಳುತ್ತಾರೆ, ಮತ್ತು ಯಾವುದೇ ಸಂಶಯಾಸ್ಪದ ಚಟುವಟಿಕೆ ಕಂಡುಬಂದಾಗ ತಕ್ಷಣ ಪೊಲೀಸ್‌ಗಳಿಗೆ ತಿಳಿಸಲಾಗುತ್ತದೆ. ಪೊಲೀಸ್‌ಗಳು ರಿಯಲ್-ಟೈಮ್‌ನಲ್ಲಿ ನಿಗಾವಹಿಸಿ, ತ್ವರಿತ ಕ್ರಮ ಕೈಗೊಳ್ಳುತ್ತಾರೆ.


ಈ ಕ್ರಮದ ಫಲವಾಗಿ ಸ್ಥಳೀಯ ಜನರು ಹೆಚ್ಚಿದ ಭದ್ರತೆಯ ಅನುಭವವನ್ನು ಪಡೆಯುತ್ತಿದ್ದಾರೆ ಮತ್ತು ಕಳ್ಳತನದ ಭಯ ಕಡಿಮೆಯಾಗಿದೆ. ಪೊಲೀಸ್ ಅಧಿಕಾರಿ ರವಿ ಕುಮಾರ್ ಅವರು ಈ ಯಶಸ್ಸನ್ನು “ಸಮಾಜದ ಸಹಕಾರ ಮತ್ತು ತಂತ್ರಜ್ಞಾನ ಸಂಯೋಜನೆಯಿಂದ ಸಾಧ್ಯವಾಯಿತು” ಎಂದು ಹೇಳಿದ್ದಾರೆ.

ಅಧಿಕಾರಿಗಳು ಈ ಮಾದರಿಯನ್ನು ಉತ್ತರ ಕನ್ನಡದ ಇತರ ಪಟ್ಟಣಗಳು ಮತ್ತು ಗ್ರಾಮಗಳಿಗೆ ವಿಸ್ತರಿಸುವ ಯೋಜನೆಗಳನ್ನು ರೂಪಿಸುತ್ತಿದ್ದಾರೆ, ಇದರಿಂದ ಪ್ರದೇಶದ ಒಟ್ಟಾರೆ ಭದ್ರತೆ ಹೆಚ್ಚುವ ನಿರೀಕ್ಷೆ ಇದೆ.

— Ganesh S

LOCAL

ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ದರ ಏರಿಕೆ ಸಾಧ್ಯತೆ, ನವೆಂಬರ್ 5 ರಿಂದ ಜಾರಿಗೆ



ಸಾರಿಗೆ ಇಲಾಖೆ ಮೂಲಗಳ ಪ್ರಕಾರ, ರಾಜ್ಯದ ಕೆಎಸ್‌ಆರ್‌ಟಿಸಿ ಮತ್ತು ಬಿಎಂಟಿಸಿ ಬಸ್ ದರವನ್ನು ನವೆಂಬರ್ 5 ರಿಂದ ಪರಿಷ್ಕರಿಸುವ ಸಾಧ್ಯತೆ ಇದೆ.


ಇಂಧನ ವೆಚ್ಚದ ಏರಿಕೆಯನ್ನು ಸಮತೋಲನಗೊಳಿಸಲು ಈ ಕ್ರಮ ಕೈಗೊಳ್ಳಲಾಗುತ್ತಿದೆ.

ಇದರ ಪರಿಣಾಮವಾಗಿ ಪ್ರಯಾಣಿಕರು ಹೆಚ್ಚುವರಿ ವೆಚ್ಚವನ್ನು ಎದುರಿಸಬಹುದು, ಆದರೆ ಅಧಿಕಾರಿಗಳು ದರ ಏರಿಕೆಯನ್ನು ಸೂಕ್ತ ಮಟ್ಟಕ್ಕೆ ಇಡುವುದಾಗಿ ಹೇಳಿದ್ದಾರೆ.

ಇನ್ನಷ್ಟು ವಿವರಗಳು ಮತ್ತು ನಿಖರ ದರ ಏರಿಕೆಯ ಪ್ರಮಾಣವನ್ನು ಅಧಿಕೃತ ಘೋಷಣೆಯ ಮೂಲಕ ತಿಳಿಸಲಾಗುವುದು.

— Ganesh S

ಮಂಗಳೂರು ಕರಾವಳಿಯಲ್ಲಿ ಮೀನುಗಾರನ ರಕ್ಷಣೆಗೆ ಭಾರತೀಯ ಕೋಸ್ಟ್ ಗಾರ್ಡ್ ಸಿಬ್ಬಂದಿ ನೆರವು



ಮಂಗಳೂರು ಕರಾವಳಿ ತೀರದ ಸಮುದ್ರದಲ್ಲಿ ದಾರಿ ತಪ್ಪಿ ಸಿಲುಕಿದ ಮೀನುಗಾರನನ್ನು ಭಾರತೀಯ ಕೋಸ್ಟ್ ಗಾರ್ಡ್ ಸಿಬ್ಬಂದಿ ಸುರಕ್ಷಿತವಾಗಿ ರಕ್ಷಿಸಿದರು.


ಕರಾವಳಿ ರಕ್ಷಣಾ ಪಡೆಯ ಸಾಹಸವಾಗಿ ರಕ್ಷಣಾ ಕಾರ್ಯ ನಡೆಯಿತು. ಸಿಬ್ಬಂದಿ ಮೀನುಗಾರನನ್ನು ಸಮುದ್ರದಿಂದ ಹೊರತೆಗೆದು, ಅವನಿಗೆ ಪ್ರಥಮ ಚಿಕಿತ್ಸೆ ನೀಡಿದರು.

ರಕ್ಷಣೆಯ ನಂತರ ಮೀನುಗಾರನನ್ನು ಸ್ಥಳೀಯ ಆಸ್ಪತ್ರೆಗೆ ಕರೆದೊಯ್ಯಲಾಗಿದ್ದು, ಅವನ ಆರೋಗ್ಯ ಸ್ಥಿತಿ ಸ್ಥಿರವಾಗಿದೆ.

— Ganesh S

ENTERTAINMENT

ಸಿನಿ ಸಂವಾದ ತರಬೇತಿ ಕಾರ್ಯಾಗಾರ: ಚಲನಚಿತ್ರ ಆಸಕ್ತರಿಗೆ ತೋಟಗಾರಿಕೆ ಇಲಾಖೆ ಮತ್ತು ಪ್ರಜಾಪತ್ರಿಕೆಯಿಂದ ಅರ್ಜಿ ಆಹ್ವಾನ



ಸಿನಿ ಸಂವಾದ ತರಬೇತಿ ಕಾರ್ಯಾಗಾರವು ಚಲನಚಿತ್ರ ಆಸಕ್ತರಿಗೆ ವಿಶೇಷ ತರಬೇತಿ ಅವಕಾಶವನ್ನು ಒದಗಿಸುತ್ತದೆ. ಈ ಕಾರ್ಯಾಗಾರದಲ್ಲಿ ಭಾಗವಹಿಸುವವರು ಚಲನಚಿತ್ರ ಸಂವಾದಗಳ ಕಲೆಯನ್ನು ಕಲಿಯುವ ಅವಕಾಶ ಪಡೆಯುತ್ತಾರೆ.


ತೋಟಗಾರಿಕೆ ಇಲಾಖೆ ಹಾಗೂ ಪ್ರಜಾಪತ್ರಿಕೆಯಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ಅರ್ಜಿಗಳನ್ನು ಸಲ್ಲಿಸುವ ಮೂಲಕ ಈ ತರಬೇತಿಯಲ್ಲಿ ಪಾಲ್ಗೊಳ್ಳಬಹುದು.

ಈ ತರಬೇತಿ ಕಾರ್ಯಾಗಾರವು ಚಲನಚಿತ್ರ ಕ್ಷೇತ್ರದಲ್ಲಿ ಆಸಕ್ತಿ ಹೊಂದಿರುವವರಿಗೆ ತಮ್ಮ ಕೌಶಲ್ಯವನ್ನು ವೃದ್ಧಿಸುವ ಉತ್ತಮ ಅವಕಾಶವಾಗಿದೆ.

— Ganesh S

LOCAL

ಬೆಂಗಳೂರು ಸೆಂಟ್ರಲ್ ಕಾಲೇಜು ಆವರಣದಲ್ಲಿ ಕರ್ನಾಟಕ ಏಕೀಕರಣ ಸ್ಮಾರಕ ನಿರ್ಮಾಣ ಕಾರ್ಯ ಆರಂಭ



ಬೆಂಗಳೂರು, ಕರ್ನಾಟಕ – ಸೆಂಟ್ರಲ್ ಕಾಲೇಜು ಆವರಣದಲ್ಲಿ ಕರ್ನಾಟಕ ಏಕೀಕರಣದ ನೆನಪಿಗಾಗಿ ಸುಂದರ ಸ್ಮಾರಕ ನಿರ್ಮಾಣ ಕಾರ್ಯಕ್ಕೆ ಸಿದ್ಧತೆಗಳು ನಡೆಯುತ್ತಿವೆ. ಈ ಸ್ಮಾರಕವು ರಾಜ್ಯದ ಏಕೀಕರಣದ ಇತಿಹಾಸಿಕ ಮಹತ್ವವನ್ನು ಪ್ರತಿಬಿಂಬಿಸುವ ಉದ್ದೇಶದಿಂದ ವಿನ್ಯಾಸಗೊಳಿಸಲಾಗಿದ್ದು, ಸ್ಥಳೀಯ ಸಮುದಾಯ ಮತ್ತು ವಿದ್ಯಾರ್ಥಿಗಳಿಂದ ಸಹಕಾರವನ್ನು ಪಡೆಯುತ್ತಿದೆ.


ಸಂಬಂಧಿಸಿದ ಪ್ರಾಥಮಿಕ ಯೋಜನೆಗಳು ಕಾಲೇಜು ಆಡಳಿತ ಮತ್ತು ಸ್ಥಳೀಯ ಅಧಿಕಾರಿಗಳ ಸಮಾಲೋಚನೆಯ ಮೂಲಕ ನಿರ್ಧರಿಸಲಾಯಿತು. ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳು ಮತ್ತು ಕೆಲಸದ ಪ್ರಗತಿಯನ್ನು ಮೇಲ್ವಿಚಾರಣೆ ಮಾಡಲು ವಿಶೇಷ ತಂಡವನ್ನು ಸ್ಥಾಪಿಸಲಾಗಿದೆ.

ಈ ಯೋಜನೆಗೆ ಸಂಬಂಧಿಸಿದಂತೆ, ಪ್ರಾಜೆಕ್ಟ್ ನಿರ್ವಾಹಕರು ಮತ್ತು ಕಾಲೇಜು ಪ್ರಿನ್ಸಿಪಲ್‌ಗಳು ಭವಿಷ್ಯದ ಸಂಭ್ರಮ ಮತ್ತು ಶಿಕ್ಷಣ ಸಂಬಂಧಿ ಚಟುವಟಿಕೆಗಳಿಗೆ ಈ ಸ್ಮಾರಕವು ಮಹತ್ವದ ಪಾತ್ರ ವಹಿಸುವುದನ್ನು ಹಂಚಿಕೊಂಡಿದ್ದಾರೆ. ಸ್ಮಾರಕದ ಪೂರ್ಣಗೊಳಿಸುವ ದಿನಾಂಕ ಇನ್ನೂ ನಿರ್ಧರಿಸಲಾಗಿಲ್ಲ, ಆದರೆ ಪ್ರಸ್ತುತ ಕೆಲಸಗಳು ಸಮಯಕ್ಕೆ ಸರಿಯಾಗಿ ಮುಗಿಯುವ ನಿರೀಕ್ಷೆಯಿದೆ.

— Ganesh S

SPORTS

ಕಲಬುರಗಿ ಎಸ್.ಆರ್.ಎನ್ ಮೆಹ್ತಾ ಶಾಲೆಯ ವಿದ್ಯಾರ್ಥಿ ರಾಷ್ಟ್ರಮಟ್ಟದ ಚೆಸ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾದರು



ಕಲಬುರಗಿ, ಕರ್ನಾಟಕ – ಎಸ್.ಆರ್.ಎನ್ ಮೆಹ್ತಾ ಶಾಲೆಯ ವಿದ್ಯಾರ್ಥಿ ತನ್ನ ಶ್ರೇಷ್ಠ ಚೆಸ್ ಕೌಶಲ್ಯದಿಂದ ರಾಷ್ಟ್ರೀಯ ಮಟ್ಟದ ಚೆಸ್ ಚಾಂಪಿಯನ್‌ಶಿಪ್‌ಗೆ ಆಯ್ಕೆಯಾದರು.


ವಿದ್ಯಾರ್ಥಿ ಇತ್ತೀಚಿನ ಪ್ರಾಂತ್ಯೀಯ ಸ್ಪರ್ಧೆಯಲ್ಲಿ ಅತ್ಯುತ್ತಮ ಪ್ರದರ್ಶನ ನೀಡಿದ್ದು, ಆಯ್ಕೆ ಸಮಿತಿಯ ಗಮನ ಸೆಳೆದಿತು. ಆಯ್ಕೆಯ ಪ್ರಕ್ರಿಯೆ ಕಠಿಣವಾಗಿದ್ದು, ಉತ್ತಮ ರೇಟಿಂಗ್ ಮತ್ತು ಆಟದ ತಂತ್ರಗಳ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ.

ಶಾಲೆ ಮತ್ತು ಸ್ಥಳೀಯ ಸಮುದಾಯ ಈ ಸಾಧನೆಯನ್ನು ಹರ್ಷದಿಂದ ಸ್ವೀಕರಿಸಿ, ವಿದ್ಯಾರ್ಥಿಗೆ ಬೆಂಬಲ ಮತ್ತು ಪ್ರೋತ್ಸಾಹ ನೀಡುವ ಮೂಲಕ ಮುಂದಿನ ಸ್ಪರ್ಧೆಗೆ ತಯಾರಿ ಮಾಡಿಕೊಳ್ಳುವಂತೆ ಪ್ರೋತ್ಸಾಹಿಸಿದೆ. ರಾಷ್ಟ್ರಮಟ್ಟದ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಉತ್ತಮ ಪ್ರದರ್ಶನ ನೀಡುವ ನಿರೀಕ್ಷೆ ಇದೆ.

— Ganesh S

LOCAL

ಬೆಂಗಳೂರು ಚಾಮರಾಜಪೇಟೆ ಮತ್ತು ಎಂ.ಜಿ ರಸ್ತೆಯಲ್ಲಿ 71ನೇ ಕರ್ನಾಟಕ ರಾಜ್ಯೋತ್ಸವದ ಭವ್ಯ ಆಚರಣೆ




71ನೇ ಕರ್ನಾಟಕ ರಾಜ್ಯೋತ್ಸವವನ್ನು ಬೆಂಗಳೂರಿನ ಚಾಮರಾಜಪೇಟೆ ಮತ್ತು ಎಂ.ಜಿ ರಸ್ತೆಯಲ್ಲಿ ಭವ್ಯವಾಗಿ ಆಚರಿಸಲಾಯಿತು. ಈ ಉತ್ಸವದ ಮುಖ್ಯ ಉದ್ದೇಶ ರಾಜ್ಯದ ಸಂಸ್ಕೃತಿ ಮತ್ತು ಪರಂಪರೆಯನ್ನು ಜನಸಾಮಾನ್ಯರ ಮುಂದೆ ಪ್ರಸ್ತುತಪಡಿಸುವುದು.

ಕಾರ್ಯಕ್ರಮದಲ್ಲಿ ವೀರಗಾಸೆ, ಹುಲಿ ಕುಣಿತ, ಡೊಳ್ಳು ಕುಣಿತ ಹಾಗೂ ಯಕ್ಷಗಾನ ಕಲಾತಂಡಗಳ ಜೀವಂತ ಪ್ರದರ್ಶನಗಳು ನಡೆಯಿತು. ಪ್ರತಿ ಕಲಾ ರೂಪವೂ ಪ್ರೇಕ್ಷಕರಿಂದ ಉತ್ಸಾಹಭರಿತವಾದ ಪ್ರತಿಕ್ರಿಯೆ ಪಡೆದಿತು.

ಈ ಉತ್ಸವದ ಮೂಲಕ ಕರ್ನಾಟಕದ ಸಂಸ್ಕೃತಿ ಪರಂಪರೆಯನ್ನು ಪ್ರಚಾರ ಮಾಡಲು ಹಾಗೂ ಜನರಲ್ಲಿ ರಾಜ್ಯೋತ್ಸವದ ಉತ್ಸವಭಾವವನ್ನು ಹೆಚ್ಚಿಸಲು ಪ್ರಯತ್ನಿಸಲಾಯಿತು.

— Ganesh S

ಗೂಗಲ್ ಸಂಸ್ಥೆಯ ಬಾಹ್ಯಾಕಾಶ AI ಪರೀಕ್ಷೆ ಅಮೆರಿಕದ ಯೋಜನೆಗೆ ಯಶಸ್ಸು



ಗೂಗಲ್ ಸಂಸ್ಥೆಯು ಅಮೆರಿಕದ ಬಾಹ್ಯಾಕಾಶ ಯೋಜನೆಗಾಗಿ ಬಾಹ್ಯಾಕಾಶದಲ್ಲಿ ಮೊದಲ ಕೃತಕ ಬುದ್ಧಿಮತ್ತೆ (AI) ಪರೀಕ್ಷೆಯನ್ನು ನಡೆಸಿ ಯಶಸ್ವಿಯಾಗಿ ಪೂರ್ಣಗೊಳಿಸಿದೆ.


ಈ ಪರೀಕ್ಷೆ ಬಾಹ್ಯಾಕಾಶ ಸಂಶೋಧನೆಯಲ್ಲಿ AI ಬಳಕೆಯ ಮೊದಲ ಪ್ರಯತ್ನವಾಗಿದ್ದು, ಅಮೆರಿಕದ ಬಾಹ್ಯಾಕಾಶ ಯೋಜನೆಗೆ ಮಹತ್ವದ ಹೆಜ್ಜೆಯಾಗಿದೆ.

ಗೂಗಲ್ ಸಂಸ್ಥೆಯ ಈ ಸಾಧನೆ ಬಾಹ್ಯಾಕಾಶ ಮತ್ತು AI ಕ್ಷೇತ್ರಗಳ ಸಂಯೋಜನೆಯಲ್ಲಿ ಹೊಸ ಸಾಧ್ಯತೆಗಳನ್ನು ತೆರೆದಿಡುತ್ತದೆ.

— Ganesh S

LOCAL

16 ವರ್ಷದ ಆರ್ಯನ್, 9 ಗಿನ್ನೆಸ್ ದಾಖಲೆಗಳೊಂದಿಗೆ ವರ್ಷದಲ್ಲೇ ಬಾಲಕನ ಗಿನ್ನೆಸ್ ದಾಖಲೆ



16 ವರ್ಷದ ಆರ್ಯನ್, ಅತ್ಯಂತ ಕಿರಿಯ ವಯಸ್ಸಿನಲ್ಲಿ 9 ಗಿನ್ನೆಸ್ ದಾಖಲೆಗಳನ್ನು ಬರೆಯುವ ಮೂಲಕ ವರ್ಷದಲ್ಲೇ ಬಾಲಕನ ಗಿನ್ನೆಸ್ ದಾಖಲೆ ಸಾಧಿಸಿದ್ದಾರೆ.

ಈ ದಾಖಲೆಗಳು ವಿವಿಧ ಕ್ಷೇತ್ರಗಳಲ್ಲಿ ಇದ್ದು, ಆರ್ಯನ್ ಅವರ ಪ್ರತಿಭೆ ಮತ್ತು ಪರಿಶ್ರಮದ ಫಲಿತಾಂಶವನ್ನು ಪ್ರತಿಬಿಂಬಿಸುತ್ತವೆ.


ಗಿನ್ನೆಸ್ ವರ್ಲ್ಡ್ ರೆಕಾರ್ಡ್ಸ್ ಸಂಸ್ಥೆಯು ಈ ಸಾಧನೆಯನ್ನು ಅಧಿಕೃತವಾಗಿ ಮಾನ್ಯತೆ ನೀಡಿದ್ದು, ಆರ್ಯನ್ ಅವರ ಸಾಧನೆ ದೇಶಾದ್ಯಂತ ಗಮನ ಸೆಳೆದಿದೆ.

ಈ ಅಪರೂಪದ ಸಾಧನೆ ಯುವಕರಿಗೆ ಪ್ರೇರಣೆಯಾಗಿ, ಭವಿಷ್ಯದ ಪ್ರತಿಭಾವಂತರಿಗೆ ಮಾದರಿಯಾಗಿ ಪರಿಣಮಿಸಿದೆ.

— Ganesh S

ENTERTAINMENT

‘ಲಂಬೋದರ 2.0’ ಟ್ರೈಲರ್ ಬಿಡುಗಡೆ, ಭಾರತದಲ್ಲಿ ಮೊದಲ ಹ್ಯೂಮನಾಯ್ಡ್ ರೋಬೋಟ್ ನಟನಾಗಿ



ಭಾರತದ ಚಿತ್ರೋದ್ಯಮದಲ್ಲಿ ಹೊಸ ಮೈಲಿಗಲ್ಲು ಸಾಧಿಸಲಾಯಿತು; ‘ಲಂಬೋದರ 2.0’ ಚಿತ್ರದ ಟ್ರೈಲರ್ ಬಿಡುಗಡೆಯೊಂದಿಗೆ, ನೈಜ ಹ್ಯೂಮನಾಯ್ಡ್ ರೋಬೋಟ್ ಮೊದಲ ಬಾರಿಗೆ ನಟನಾಗಿ ಪರದೆಗೆ ಬಂದಿದೆ.


ಈ ಚಿತ್ರವು ಹ್ಯೂಮನಾಯ್ಡ್ ರೋಬೋಟಿನ ತಾಂತ್ರಿಕ ಸಾಮರ್ಥ್ಯವನ್ನು ಕಲೆ ಮತ್ತು ಮನರಂಜನೆಯೊಂದಿಗೆ ಸಂಯೋಜಿಸುವ ಪ್ರಯತ್ನವಾಗಿದ್ದು, ಟ್ರೈಲರ್‌ನಲ್ಲಿ ರೋಬೋಟಿನ ನಿಖರವಾದ ಅಭಿವ್ಯಕ್ತಿ ಮತ್ತು ಸಂವಹನವನ್ನು ಪ್ರೇಕ್ಷಕರು ನೇರವಾಗಿ ಅನುಭವಿಸಬಹುದು.

ಭಾರತೀಯ ಚಿತ್ರರಂಗದಲ್ಲಿ ತಂತ್ರಜ್ಞಾನ ಮತ್ತು ಕಲೆಯ ಸಂಧಿಯಲ್ಲಿ ಹೊಸ ದಾರಿ ತೆರೆಯುವಂತೆ ನೋಡಿಕೊಳ್ಳುತ್ತಿದ್ದಾರೆ. ಟ್ರೈಲರ್ ಬಿಡುಗಡೆಗೆ ಸಂಬಂಧಿಸಿದ ಅಧಿಕೃತ ಹೇಳಿಕೆ ಪ್ರಕಾರ, ಈ ಪ್ರಾಜೆಕ್ಟ್‌ವು ಭವಿಷ್ಯದ ಚಿತ್ರ ನಿರ್ಮಾಣದಲ್ಲಿ ರೋಬೋಟಿಕ್ ತಂತ್ರಜ್ಞಾನಗಳ ಬಳಕೆಯನ್ನು ಹೆಚ್ಚಿಸುವ ಉದ್ದೇಶವನ್ನು ಹೊಂದಿದೆ.

‘ಲಂಬೋದರ 2.0’ ಚಿತ್ರದ ಪೂರ್ಣ ಬಿಡುಗಡೆ ದಿನಾಂಕ ಹಾಗೂ ಇನ್ನಷ್ಟು ವಿವರಗಳು ಮುಂದಿನ ದಿನಗಳಲ್ಲಿ ಪ್ರಕಟವಾಗುವ ನಿರೀಕ್ಷೆಯಿದೆ.

— Ganesh S

ಮ್ಯೂಚುವಲ್ ಫಂಡ್ ಹೂಡಿಕೆದಾರರಿಗೆ ಸಿಹಿ ಸುದ್ದಿ: ಆನ್‌ಲೈನ್ ಖರೀದಿಯಲ್ಲಿ ದಲ್ಲಾಳಿ ಕಮಿಷನ್ ಗೊಂದಲಕ್ಕೆ ಮುಕ್ತಿ




ಮ್ಯೂಚುವಲ್ ಫಂಡ್ ಹೂಡಿಕೆದಾರರಿಗೆ ಸಿಹಿ ಸುದ್ದಿ ಲಭಿಸಿದೆ. ಆನ್‌ಲೈನ್ ಮೂಲಕ ಮ್ಯೂಚುವಲ್ ಫಂಡ್ (Mutual Funds) ಖರೀದಿಸುವಾಗ ವಿಧಿಸಲಾಗುತ್ತಿದ್ದ ದಲ್ಲಾಳಿ ಕಮಿಷನ್ ಕಡಿತದ ಗೊಂದಲಕ್ಕೆ ಮುಕ್ತಿ ಸಿಗಲಿದೆ.

ಹೂಡಿಕೆದಾರರು ಆನ್‌ಲೈನ್ ಮೂಲಕ ಮ್ಯೂಚುವಲ್ ಫಂಡ್ ಖರೀದಿಸುವಾಗ ದಲ್ಲಾಳಿಗಳ ಮೂಲಕವೇ ಖರೀದಿಸುವುದು ಸಾಮಾನ್ಯ. ಆದರೆ, ಈ ಪ್ರಕ್ರಿಯೆಯಲ್ಲಿ ದಲ್ಲಾಳಿಗಳಿಗೆ ನೀಡುವ ಕಮಿಷನ್‌ನಲ್ಲಿ ಕಡಿತವಾಗುತ್ತಿರುವುದು ಹೂಡಿಕೆದಾರರಲ್ಲಿ ಗೊಂದಲಕ್ಕೆ ಕಾರಣವಾಗಿತ್ತು.

ಈಗ ಈ ಗೊಂದಲಕ್ಕೆ ಮುಕ್ತಿ ಸಿಗಲಿದ್ದು, ಹೂಡಿಕೆದಾರರು ತಮ್ಮ ಹಣವನ್ನು ಸುರಕ್ಷಿತವಾಗಿ ಮತ್ತು ಪಾರದರ್ಶಕವಾಗಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಲು ಸಹಾಯಕವಾಗಲಿದೆ. ಇದು ಹೂಡಿಕೆದಾರರ ನಂಬಿಕೆಯನ್ನು ಮತ್ತಷ್ಟು ಏರಿಸಲಿದೆ.

SPORTS

ಅಫ್ಘಾನಿಸ್ತಾನ ತಂಡ ಹಾಂಗ್‌ಕಾಂಗ್ ಸಿಕ್ಸಸ್ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದೆ




ಹಾಂಗ್‌ಕಾಂಗ್ ಸಿಕ್ಸಸ್ ಕ್ರಿಕೆಟ್ ಟೂರ್ನಿಯಲ್ಲಿ ಅಫ್ಘಾನಿಸ್ತಾನ ತಂಡವು ಆಸ್ಟ್ರೇಲಿಯಾವನ್ನು ಸೋಲಿಸಿ ಚಾಂಪಿಯನ್‌ಶಿಪ್ ಗೆದ್ದಿದೆ. ಅಂತಿಮ ಪಂದ್ಯದಲ್ಲಿ ಅಫ್ಘಾನಿಸ್ತಾನ ತಂಡದ ದಾಳಿಯು ಶಕ್ತಿಯುತವಾಗಿದ್ದು, ಆಸ್ಟ್ರೇಲಿಯಾ ತಂಡವನ್ನು ಮಣಿಸಿದ ನಂತರ ಟೂರ್ನಿಯ ಶೀರ್ಷಿಕೆಯನ್ನು ಹಿಡಿದಿದೆ.

ಈ ಟೂರ್ನಿ ಹಾಂಗ್‌ಕಾಂಗ್‌ನಲ್ಲಿ ಆಯೋಜಿಸಲ್ಪಟ್ಟಿದ್ದು, ಆರು ಆಟಗಾರರ ಸಂಕ್ಷಿಪ್ತ ಫಾರ್ಮಾಟ್‌ನ್ನು ಅನುಸರಿಸಿದೆ. ವಿವಿಧ ದೇಶಗಳ ತಂಡಗಳು ಭಾಗವಹಿಸಿದ ಈ ಸ್ಪರ್ಧೆಯಲ್ಲಿ, ವೇಗದ ಆಟ ಮತ್ತು ಉತ್ಸಾಹಭರಿತ ಕ್ಷಣಗಳು ಪ್ರೇಕ್ಷಕರನ್ನು ಆಕರ್ಷಿಸಿವೆ. ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು ಆಗಿದೆ. ಈ ಜಯವು ತಂಡದ ಆತ್ಮವಿಶ್ವಾಸವನ್ನು ಹೆಚ್ಚಿಸುವುದರ ಜೊತೆಗೆ, ಅಂತರರಾಷ್ಟ್ರೀಯ ಮಟ್ಟದಲ್ಲಿ ಅಫ್ಘಾನಿಸ್ತಾನ ಕ್ರಿಕೆಟ್‌ಗೆ ಹೊಸ ಪ್ರೇರಣೆಯನ್ನು ನೀಡುತ್ತದೆ.

— Ganesh S

ENTERTAINMENT

ಅಮೆರಿಕಾ ಅಮೆರಿಕಾ–೨ 50 ದಿನಗಳ ಯಶಸ್ಸು: ನಾಗತಿಹಳ್ಳಿ ಚಂದ್ರಶೇಖರ ನಿರ್ದೇಶನದ ಚಿತ್ರಕ್ಕೆ ಬೆಂಗಳೂರಿನಲ್ಲಿ ಸಂಭ್ರಮಾಚರಣೆ



ಅಮೆರಿಕಾ ಅಮೆರಿಕಾ–೨ ಚಿತ್ರವು 50 ದಿನಗಳ ಯಶಸ್ವಿ ಪ್ರದರ್ಶನವನ್ನು ಪೂರ್ಣಗೊಳಿಸಿದೆ. ಈ ಮೈಲುಗಲ್ಲು ಸಾಧನೆಗೆ ನಾಗತಿಹಳ್ಳಿ ಚಂದ್ರಶೇಖರ ನಿರ್ದೇಶನದ ಈ ಚಿತ್ರವು ಪ್ರೇಕ್ಷಕರಲ್ಲಿ ಜನಪ್ರಿಯತೆ ಗಳಿಸಿದೆ.

ಈ ಯಶಸ್ಸು ಚಿತ್ರಕ್ಕೆ ಹೊಸ ಮಟ್ಟದ ಗುರುತಿನ ಸೂಚನೆ. 50 ದಿನಗಳ ಪ್ರದರ್ಶನವು ಚಿತ್ರರಂಗದ ದೀರ್ಘಾವಧಿ ಪ್ರದರ್ಶನದ ಮಾನದಂಡವನ್ನು ತಲುಪಿದೆ. ಆಚರಿಸಲು ಸಂಭ್ರಮಾಚರಣೆ ನಡೆಸಲಾಯಿತು. ಪ್ರೇಕ್ಷಕರು, ಕಲಾವಿದರು ಮತ್ತು ಉದ್ಯಮಿಗಳು ಒಟ್ಟಾಗಿ ಹಾಜರಾಗಿ, ಚಿತ್ರದ ಯಶಸ್ಸನ್ನು ಸಂಭ್ರಮಿಸಿದರು.

ಈ ಘಟನೆ ಚಿತ್ರರಂಗದ ಪ್ರೇಕ್ಷಕರ ಆಸಕ್ತಿ ಮತ್ತು ನಿರ್ದೇಶಕರ ಕಲಾತ್ಮಕ ದೃಷ್ಟಿಯ ಪ್ರತಿಬಿಂಬವಾಗಿದೆ.

— Ganesh S